**ಸಾಕ್ಷಿಯನ್ನು ದಿಃ 15.04.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್.ಕೆ.ಆರ್ ವಕೀಲರ ಪರವಾಗಿ ಶ್ರೀಮತಿ ಆರ್.ಎಂ.ಎಸ್ ವಕೀಲರಿಂದ**

ನಾನು ಈ ದಾವೆಯಲ್ಲಿ ವಾದಿಯ ಸಾಕ್ಷಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ, ಸತ್ಯವಾಗಿದೆ ಮತ್ತು ಸಹಿ ನನ್ನದೆ ಆಗಿದೆ.

**ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.**

| | |
|---|---|
| ನಿಪಿ.31 ಮತ್ತು 32 | ನೋಟರಿ ಲೆಡ್ಜರ್ ಮತ್ತು ರಿಸಿಪ್ಟ್ |
| ನಿಪಿ.31(ಎ),(ಬಿ) ಯಿಂದ (ಡಿ), ನಿಪಿ. 31(ಇ) ನಿಪಿ.31(ಎಫ್. ಮತ್ತು ಜಿ) ನಿಪಿ.31(ಹೆಚ್ ನಿಪಿ.31 (ಐ ಮತ್ತು ಜೆ) ನಿಪಿ.(ಕೆ ಮತ್ತು ಎಲ್) ನಿಪಿ.31(ಎಂ ಮತ್ತು ಎನ್) ನಿಪಿ. 31(ಓ ಯಿಂದ ಕ್ಯೂ) | ನಿಪಿ. 31 ರ ನೋಟರಿ ಲೆಡ್ಜರ್ ನ ಸಿರಿಯಲ್ ನಂ. 362/2020 ನಲ್ಲಿ ಸೇಲ್ ಅಗ್ರಿಮೆಂಟ್ ಎಂಟ್ರಿ ಮಾಡಿರುವುದು ಇದ್ದು, ಸದರಿ ಪುಟವನ್ನು ನಿಪಿ.31(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ 1 ನೇ ಪ್ರತಿವಾದಿ ಕಾಳನಾಯಕ ರವರ ಪೋಟೊ ಹಾಕಿಸಿ, ಸಹಿ ಮತ್ತು ಹೆಬ್ಬಟ್ಟು ಹಾಕಿಸಿರುತ್ತೇನೆ ಎಂದು ನೋಡಿ ಗುರುತಿಸಿದ್ದರಿಂದ, ಸದರಿ ಪೋಟೊ, ಸಹಿ, ಮತ್ತು ಹೆಬ್ಬಟ್ಟು ಗುರುತನ್ನು ಕ್ರಮವಾಗಿ, ಅವರ ಹಂಡತಿ ಜಯಮ್ಮ ರವರ ಹೆಬ್ಬಟ್ಟು ಗುರುತು ಹಾಕಿಸಿದ್ದು, ಅವರ ಮಗಳು ಸವಿತಾ ರವರ ಸಹಿ ಮತ್ತು ಹೆಬ್ಬಟ್ಟು ಗುರುತನ್ನು, ಇನ್ನೊಬ್ಬ ಮಗಳು ಸುಮಿತ್ರಾ ರವರ ಹೆಬ್ಬಟ್ಟು ಮತ್ತು ಸಹಿಯನ್ನು, ಇನ್ನೊಬ್ಬ ಮಗಳು ಲತಾ ರವರ ಹೆಬ್ಬಟ್ಟು ಮತ್ತು ಸಹಿಯನ್ನು, ಹಾಗೂ ವಾದಿಯ ಪೋಟೊ, ಸಹಿ ಮತ್ತು ಹೆಬ್ಬಟ್ಟು ಗುರುತುಗಳನ್ನು ಕ್ರಮವಾಗಿ |

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಸಿ.ಎಸ್ ವಕೀಲರಿಂದಃ–**

ನಮ್ಮ ಕಛೇರಿಗೆ ವಾದಿ, ಪ್ರತಿವಾದಿ ಮತ್ತು ಸಾಕ್ಷಿದಾರರು ಒಟ್ಟಿಗೆ ಬೆಳಿಗ್ಗೆ 11.30 ಕ್ಕೆ ಬಂದಿದ್ದರು. ಬರುವಾಗಲೆ ಅವರು ಬಾಂಡ್ ಪೇಪರ್ ಅನ್ನು ತಂದಿದ್ದರು. ಸದರಿ ಸ್ಟಾಂಪ್ ಪೇಪರ್ ಪಕ್ಷಗಾರು ಬಂದಾಗಲೇ ತಂದಿದ್ದರು, ಸದರಿ ಪೇಪರ್ ಕಾಳನಾಯಕ ರವರ ಕೈಯಲ್ಲಿ ಇತ್ತು. 1 ನೇ ಪ್ರತಿವಾದಿಯೆ ವಂಶವೃಕ್ಷವನ್ನು ತಂದಿದ್ದರು. ನಮ್ಮ ಕಛೇರಿಯಲ್ಲಿ ಸಿಸಿ ಕ್ಯಾಮೆರಾ ಇರುವುದಿಲ್ಲ. ನಿಪಿ. ಅಗ್ರಿಮೆಂಟ್ ನಲ್ಲಿ 1 ನೇ ಪ್ರತಿವಾದಿ ಕಾಳನಾಯಕ ರವರ ಪೋಟೊ ಮಾತ್ರ ಹಾಕಿರುತ್ತೇನೆ ಎಂದರೆ ಸಾಕ್ಷಿ ಎಲ್ಲರ ಪೋಟೊ ನಾನು ಕೇಳಿದ್ದು, ಆದರೆ 1 ನೇ ಪ್ರತಿವಾದಿ ಆರ್.ಟಿ.ಸಿ ನನ್ನ ಹೆಸರಿನಲ್ಲಿ ಮಾತ್ರ ಇರುವುದರಿಂದ ತನ್ನ ಪೋಟೊ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಸಿರಿಯಲ್ ನಂ. **362/2020** ದಿಃ **30.09.2020** ರಂದು ನಮೂದು ಮಾಡಿರುತ್ತೇನೆ. ಅಗ್ರಿಮೆಂಟ್ ಮಾಡಿಕೊಳ್ಳಲು ದಾಖಲೆಗಳನ್ನು ಪ್ರತಿವಾದಿಗಳಿಗೆ ತಂದು ಕೊಟ್ಟಿದ್ದರು.

ಆರ್.ಟಿ.ಸಿಯಲ್ಲಿ **1** ನೇ ಪ್ರತಿವಾದಿ ಹೆಸರಿನಲ್ಲಿ ಮಾತ್ರ ಇಲ್ಲ ಜಂಟಿ ಕುಟುಂಬದ ಸದಸ್ಯರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಜಂಟಿ ಕುಟುಂಬದ ಸದಸ್ಯರ ಹೆಸರಿನಲ್ಲಿ ಆರ್.ಟಿ.ಸಿ ಇದ್ದ ಕಾರಣ ಎಲ್ಲರ ಸಹಿ ಬೇಕಾಗುತ್ತದೆ ಎಂದು ಹೇಳಿದ್ದು, ಆದರೆ ಈಗಾಗಲೆ ಮೌಖಿಕವಾಗಿ ಭಾಗ ಆಗಿದ್ದು, ಅದರಂತೆ ಅವರ ಭಾಗದಲ್ಲಿ ಸ್ವಾಧೀನದಲ್ಲಿ ಇರುವುದಾಗಿ ತಿಳಿಸಿ ಪ್ರತ್ಯೇಕ ಎಂಟ್ರಿ ಮಾಡಿಸಿಕೊಳ್ಳಲು ಹಣ ಬೇಕಾಗಿರುವ ಕಾರಣ ಸೇಲ್ ಅಗ್ರಿಮೆಂಟ್ ಮಾಡಿಸಿಕೊಳ್ಳುತ್ತಿದ್ದೇವೆ ಎಂದು ತಿಳಿಸಿದ್ದರು. ಅವರು ಪ್ರತ್ಯೇಕ ಸ್ವಾಧೀನದಲ್ಲಿ ಇರುವ ಬಗ್ಗೆ ಯಾವುದೆ ಸರ್ವೆ ಸ್ಕೇಚ್ ಕೊಟ್ಟಿಲ್ಲ. ನಗದಾಗಿ ಹಣ ಕೊಟ್ಟಾಗ **500** ಮತ್ತು **100** ರ ಮುಖ ಬೆಲೆಯ ನೋಟುಗಳು ಇದ್ದವು, ಸುಮಾರು ವರ್ಷಗಳು ಆದ ಕಾರಣ ನಿಖರವಾಗಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಐ.ಓ. ಬಿ. ಬ್ಯಾಂಕ್, ಹೆಬ್ಬಾಳು ಶಾಖೆಯ **2,75,000/–** ರೂ. ನ ಚೆಕ್ ಅನ್ನು ಕೊಟ್ಟಿದ್ದರು, ಉಳಿದ **25**

ಸಾವಿರ ರೂ. ನಗದಾಗಿ ಕೊಟ್ಟಿದ್ದರು. ಸಾಕ್ಷಿದಾರರಾಗಿ ಶಿವಕುಮಾರ್, ಹರೀಶ್, ರಾಮಕೃಷ್ಣ ಮತ್ತು ಮಹದೇವ ರವರು ಸಹಿ ಹಾಕಿರುತ್ತಾರೆ.

ಸದರಿ ಸಾಕ್ಷಿದಾರರು ಪ್ರತಿವಾದಿಗಳ ಊರಿನವರು ಅಲ್ಲ ಎಂದರೆ ಅವರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ, ಪಕ್ಷಗಾರರೆ ಕರೆದುಕೊಂಡು ಬಂದಿದ್ದರು ಎನ್ನುತ್ತಾರೆ. ಸದರಿ ಸಾಕ್ಷಿದಾರರು ಇಬ್ಬರೂ ಪಕ್ಷಗಾರರ ಪರ ಸಾಕ್ಷಿದಾರರು ಎಂದು ತಿಳಿಸಿದ್ದರು. ಪ್ರತಿವಾದಿಗಳು ಯಾರು ನಮ್ಮ ಕಛೇರಿಗೆ ಬಂದಿಲ್ಲ ಎಂದರೆ ಸರಿಯಲ್ಲ. ನೋಟರಿ ಲೆಡ್ಜರ್ ನಲ್ಲಿ ಇರುವ ಹೆಬ್ಬೆಟ್ಟು ಗುರುತುಗಳೆ ಬೇರೆ ಅಗ್ರಿಮೆಂಟ್ ನಲ್ಲಿ ಇರುವ ಹೆಬ್ಬೆಟ್ಟು ಗುರುತುಗಳೆ ಬೇರೆ ಎಂದರೆ ಸರಿಯಲ್ಲ. ವಾದಿಯೊಂದಿಗೆ ಸೇರಿಕೊಂಡು ಅಗ್ರಿಮೆಂಟ್ ಅನ್ನು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

ದಿಃ 25.03.2021 ರಂದು 2 ನೇ ಅಗ್ರಿಮೆಂಟ್ ಅನ್ನು ಮಾಡಿರುತ್ತೇನೆ. ಮುಂಗಡವಾಗಿ 25 ಸಾವಿರ ರೂ. ಹಣ ಕೊಟ್ಟಿದ್ದರು. 10 ಸಾವಿರ ನಗದು, 15 ಸಾವಿರ ರೂ. ಗೆ ಐ.ಓ.ಬಿ ಬ್ಯಾಂಕ್ ನ ಚೆಕ್ ಕೊಟ್ಟಿದ್ದರು. ಒಟ್ಟು ಕ್ರಯದ ಮೊಬಲಗು 41,85,000/- ರೂ. ಆಗಿತ್ತು. ಸದರಿ ಮೊತ್ತವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ಪಕ್ಷಗಾರರು ಕಛೇರಿಗೆ ಬರುವಾಗಲೇ ಬಾಂಡ್ ಪೇಪರ್ ಅನ್ನು ತಂದು ಅಗ್ರಿಮೆಂಟ್ ವಿಚಾರ ತಿಳಿಸಿದರು. ಬಾಂಡ್ ಪೇಪರ್ ಅನ್ನು 2.17 ಕ್ಕೆ ತೆಗೆದಿರುವುದು ಎಂದರೆ ಸಾಕ್ಷಿ ಹಿಂದಿನ ದಿನವೇ ಖರೀದಿ ಮಾಡಿ ತಂದಿದ್ದರು ಎನ್ನುತ್ತಾರೆ. ಒಟ್ಟು ಕುಟುಂಬದ ಆಸ್ತಿ ಆದ ಕಾರಣ ದಾವಾ ಸ್ವತ್ತಿಗೆ ಅಗ್ರಿಮೆಂಟ್ ಮಾಡಿಕೊಡುವ ಅಧಿಕಾರ ಪ್ರತಿವಾದಿಗೆ ಇರಲಿಲ್ಲ ಎಂದರೆ ಸರಿಯಲ್ಲ.

ವಾದಿ ಮತ್ತು 1 ನೇ ಪ್ರತಿವಾದಿ ಹೊರತು ಪಡಿಸಿ ನಮ್ಮ ಕಛೇರಿಗೆ ಬೇರೆ ಯಾರು ಬಂದಿರಲಿಲ್ಲ ಎಂದರೆ ಸರಿಯಲ್ಲ. ಲಜ್ಜರ್ ನಲ್ಲಿ ಹೆಬ್ಬೆಟ್ಟು ಗುರುತು ಮತ್ತು ಸಹಿಗಳನ್ನು ನಾನೆ ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ತಂದು

ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಗ್ರಿಮೆಂಟ್ ನಲ್ಲಿ ಇರುವ ವಿಷಯಗಳನ್ನು ವಾದಿ ಮತ್ತು ಪ್ರತಿವಾದಿಗಳು ಹೇಳಿ ಬರೆಸಿದ್ದರು. ವಾದಿಗೆ ನಾನು ಚಿರಪರಿಚಿತಳಾದ ಕಾರಣ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷಡ್ಯೂಲ್ ಸ್ವತ್ತುಗಳು 3 ಐಟಂ ಗಳು ಇರುತ್ತವೆ. ಸರ್ವೆ ನಂ. 59/1, 59/3, 60 ಆಗಿರುತ್ತವೆ. ದಾವಾ ಷಡ್ಯೂಲ್ ಸ್ವತ್ತಿಗೆ ಚಕ್ಕುಬಂದಿ ಒಂದೇ ಹಾಕಿರುತ್ತೇನೆ ಎಂದರೆ ಸರಿ. ಚಕ್ಕುಬಂದಿಯನ್ನು 1 ನೇ ಪ್ರತಿವಾದಿ ಹೇಳಿ ಬರೆಸಿರುತ್ತಾರೆ. ಒಟ್ಟು ಕುಟುಂಬದ ಸ್ವತ್ತು ಆದ ಕಾರಣ ನಾನು ಬರೆದುಕೊಟ್ಟಿರುವ ಅಗ್ರಿಮೆಂಟ್ ಅಸಿಂಧು ಎಂದು ಸರಿಯಲ್ಲ. ಸದರಿ ಸ್ವತ್ತು ಎಸ್.ಸಿ , ಎಸ್.ಟಿ ಸಮುದಾಯಕ್ಕೆ ಸೇರಿದಂತಹ ಸ್ವತ್ತು ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.